ನಾನು ಕಂಡ **ವಿವೇಕಾನಂದ**



ಡಾ.ಆರ್. ಬಾಲಸುಬ್ರಹ್ಮಣ್ಯಂ

# ಭಕ್ತಿಯ ಔಚಿತ್ಯ; ಧರ್ಮಾತೀತ ಆತಿಥ್ಯ

ಎಲ್ಲ ಧರ್ಮಗಳ ಬಗ್ಗೆಯೂ ಪ್ರೀತಿ ಮತ್ತು ಸರ್ವ ಸಹಿಷ್ಣುತೆ ಹೊಂದಿದ್ದ ಸ್ವಾಮಿ ವಿವೇಕಾನಂದರು ಅದನ್ನೇ ಆಚರಿಸುತ್ತಿದ್ದರು ಮತ್ತು ಬೋಧಿಸುತ್ತಿದ್ದರು. ಅವರು ಉಪನಿಷತ್ ಮತ್ತು ಭಗವದ್ಗೀತೆಯ ಪ್ರತಿಪಾದಕರಷ್ಟೇ ಆಗಿರಲಿಲ್ಲ, ಬೈಬಲ್, ಕುರಾನ್‌ಗಳನ್ನೂ ಅಷ್ಟೇ ಸಮರ್ಥವಾಗಿ ವಿವರಿಸಿ ಹೇಳಬಲ್ಲವರಾಗಿದ್ದರು. ಭಿನ್ನ ಧರ್ಮಗಳಿಗೆ ಸೇರಿದ, ವಿಭಿನ್ನ ನಂಬಿಕೆಯುಳ್ಳ ಜನ ಅವರ ಮಾತು ಕೇಳಲು ಬರುತ್ತಿದ್ದರು. ಅದೇ ರೀತಿ ಸ್ವಾಮೀಜಿಯನ್ನು ಬಹುವಾಗಿ ಆರಾಧಿಸುತ್ತಿದ್ದ ಮತ್ತು ಗೌರವಿಸುತ್ತಿದ್ದ ಮುಸ್ಲಿಂ ಭಕ್ತರಲ್ಲಿ ಮೌಲವಿ ಸಾಹೇಬ್ ಅವರೂ ಒಬ್ಬರು. ಮೌಲವಿ ಸಾಹೇಬ್ ಅವರಿಗೆ 1891ರಲ್ಲಿ ಆಕಸ್ಮಿಕವಾಗಿ ಸ್ವಾಮೀಜಿಯ ವಿಷಯ ತಿಳಿದುಬಂತು.

1891ರ ಫೆಬ್ರುವರಿಯಲ್ಲಿ ಸ್ವಾಮೀಜಿ ರಾಜಸ್ಥಾನಕ್ಕೆ ಹೊರಟಿದ್ದರು (ಆಗ ರಜಪುತಾನ ಎಂದು ಕರೆಯಲಾಗುತ್ತಿತ್ತು) ಆಲ್ವರ್ ರೈಲು ನಿಲ್ದಾಣದಲ್ಲಿ ಇಳಿದು ಹೊರಗೆ ನಡೆದುಬರುತ್ತಿದ್ದ ಅವರಿಗೆ ಸರ್ಕಾರಿ ಚಿಕಿತ್ಸಾಲಯವೊಂದು ಕಣ್ಣಿಗೆ ಬಿತ್ತು. ಆ ಚಿಕಿತ್ಸಾಲಯದ ಮೇಲ್ವಿಚಾರಣೆ ಹೊತ್ತಿದ್ದ ಬಂಗಾಳ ಮೂಲದ ವೈದ್ಯ ಗುರುಚರಣ್ ಲಸ್ಕರ್ ಅವರನ್ನು ಭೇಟಿಯಾದ ಸ್ವಾಮೀಜಿ, 'ಇಲ್ಲೆಲ್ಲಾದರೂ ಹತ್ತಿರದಲ್ಲಿ ಸನ್ಯಾಸಿ ತಂಗಬಹುದಾದ ಸ್ಥಳ ಇದೆಯೇ?' ಎಂದು ವಿಚಾರಿಸಿದರು. ಅಪೂರ್ವ ಪ್ರಭೆಯಿಂದ ಕಂಗೊಳಿಸುತ್ತಿದ್ದ ಸ್ವಾಮೀಜಿಯಿಂದ ಪ್ರಭಾವಿತರಾದ ವೈದ್ಯರು ತಲೆಬಾಗಿ ಅವರಿಗೆ ವಂದಿಸಿದರಲ್ಲದೆ, ಪೇಟೆಯವರೆಗೆ ಖುಷಿಯಿಂದ ಅವರ ಜೊತೆಗೇ ಬಂದರು. ಅಲ್ಲಿದ್ದ ಮಳಿಗೆಗಳ ಮೇಲ್ಭಾಗದಲ್ಲಿದ್ದ ಕೋಣೆಯೊಂದನ್ನು ತೋರಿಸಿ 'ಇದು ಸನ್ಯಾಸಿಗಳಿಗಾಗಿಯೇ ಇದೆ ಸ್ವಾಮಿ, ಸದ್ಯಕ್ಕೆ ಇಲ್ಲಿ ತಂಗಲು ನಿಮಗೆ ತೊಂದರೆ ಏನೂ ಇಲ್ಲ ತಾನೇ?' ಎಂದು ಕೇಳಿದರು. ಸ್ವಾಮೀಜಿ ಆನಂದದಿಂದ ಅಲ್ಲೇ ಇರಲು ತೀರ್ಮಾನಿಸಿದರು. ವಿವೇಕಾನಂದರಿಗೆ ತುರ್ತಾಗಿ ಬೇಕಿದ್ದ ಅಗತ್ಯಗಳನ್ನು ಪೂರೈಸಿದ ವೈದ್ಯರು, ತಮ್ಮ ಮುಸ್ಲಿಂ ಸ್ನೇಹಿತನ ಮನೆಗೆ ಧಾವಿಸಿದರು. ಆ ಸ್ನೇಹಿತ ಸ್ಥಳೀಯ ಪ್ರೌಢಶಾಲೆಯಲ್ಲಿ ಉರ್ದು ಮತ್ತು ಪರ್ಷಿಯನ್ ಭಾಷೆ ಬೋಧಿಸುವ ಶಿಕ್ಷಕರಾಗಿದ್ದರು. ವೈದ್ಯರು ಉದ್ವೇಗದಿಂದ 'ಓ ಮೌಲವಿ ಸಾಹೇಬರೇ, ಬಂಗಾಳಿ ಸಾಧುವೊಬ್ಬರು ಈಗಷ್ಟೇ ಇಲ್ಲಿಗೆ ಬಂದಿದ್ದಾರೆ. ಅವರನ್ನು ನೋಡುವಿರಂತೆ ಕೂಡಲೇ ಬನ್ನಿ. ಅಂತಹ ಮಹಾತ್ಮನನ್ನು ನಾನು ಹಿಂದೆಂದೂ ಕಂಡೇ ಇಲ್ಲ. ನನ್ನ ಕೆಲಸ ಮುಗಿಸಿ ಬರುವವರೆಗೆ ಅವರೊಂದಿಗೆ ಮಾತನಾಡುತ್ತಿರಿ. ನಾನು ಆದಷ್ಟು ಬೇಗ ಬಂದು ನಿಮ್ಮನ್ನು ಸೇರಿಕೊಳ್ಳುತ್ತೇನೆ' ಎಂದು ಹೇಳಿದರು. ಬಳಿಕ ಇಬ್ಬರೂ ತರಾತುರಿಯಲ್ಲಿ ಪೇಟೆಗೆ ಬಂದರು. ತಮ್ಮ ಪಾದರಕ್ಷೆಗಳನ್ನು ಹೊರಗೆ ಬಿಚ್ಚಿಟ್ಟು ಸ್ವಾಮೀಜಿಯ ಕೋಣೆ ಪ್ರವೇಶಿಸಿದರು. ಅಷ್ಟರಲ್ಲಿ ಸ್ವಾಮೀಜಿ ತಮ್ಮ ವಸ್ತುಗಳಾದ, ಹೊದಿಕೆಯೊಂದರಲ್ಲಿ ಕಟ್ಟಿ ತಂದಿದ್ದ ಕೆಲ ಪುಸ್ತಕಗಳು, ಅರಿಶಿನ ಬಣ್ಣದ ಒಂದು ವಸ್ತ್ರದ ತುಂಡು ಮತ್ತು ಕಮಂಡಲುವನ್ನು ಜೋಡಿಸಿಟ್ಟಿದ್ದರು. ಇಬ್ಬರೂ ಭಯಭಕ್ತಿಯಿಂದ ಅವರಿಗೆ ನಮಿಸಿದರು.

ಮೌಲವಿ ಸಾಹೇಬರನ್ನು ತಮ್ಮ ಪಕ್ಕಕ್ಕೆ ಕರೆದು ಕೂರಿಸಿಕೊಂಡ ಸ್ವಾಮೀಜಿ, ಧಾರ್ಮಿಕ ವಿಷಯಗಳ ಬಗ್ಗೆ ಅವರೊಂದಿಗೆ ಪ್ರೀತಿಯಿಂದ ಸಂಭಾಷಣೆ ನಡೆಸಿದರು. 'ಕುರಾನ್ ಕುರಿತು ಅತ್ಯಂತ ಗಮನಾರ್ಹವಾದ ವಿಷಯವೊಂದಿದೆ. ಅದೆಂದರೆ 1100 ವರ್ಷಗಳಷ್ಟು ಹಿಂದೆ ಅದು ಹೇಗಿತ್ತೋ ಈಗಲೂ ಹಾಗೆಯೇ ಇದೆ. ತನ್ನ ಪರಿಶುದ್ಧತೆಯನ್ನು ಉಳಿಸಿಕೊಂಡು ತಿರುಚುವಿಕೆಯಿಂದ ಮುಕ್ತವಾಗಿದೆ' ಎಂದು ಹೇಳಿದರು.

ಗುರುಚರಣ್ ಮತ್ತು ಮೌಲವಿ ಸಾಹೇಬ್ ಇಬ್ಬರೂ ಸ್ವಾಮೀಜಿಯ ವಿಷಯವನ್ನು ತಮ್ಮ ಸ್ನೇಹಿತರಿಗೆಲ್ಲಾ ತಿಳಿಸಿದರು. ಇದರಿಂದ ಸ್ವಾಮೀಜಿಯನ್ನು ನೋಡಲು ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಾ ಹೋಗಿ ಅವರಿಗೆಲ್ಲಾ ಆ ಕೋಣೆಯಲ್ಲಿ ಸ್ಥಳಾವಕಾಶ ಒದಗಿಸುವುದು ಕಷ್ಟವಾಯಿತು. ಆಗ ಸ್ವಾಮೀಜಿ ನಿವೃತ್ತ ಎಂಜಿನಿಯರ್ ಆದ ಪಂಡಿತ್ ಶಂಭುನಾಥಜಿ ಅವರ ಮನೆಗೆ ಸ್ಥಳಾಂತರಗೊಂಡರು. ಅಲ್ಲಿ ಅವರು ಎಲ್ಲ ಜಾತಿ, ಧರ್ಮಗಳ ಭಕ್ತರನ್ನೂ ಭೇಟಿಯಾದರು. ಮುಸ್ಲಿಂ ಪಂಗಡದ ಶಿಯಾಗಳು, ಸುನ್ನಿಗಳು, ಶೈವರು, ವೈಷ್ಣವರು, ಧನಿಕರು, ಉನ್ನತ ಸ್ಥಾನಮಾನ ಹೊಂದಿದ್ದವರು ಮಾತ್ರವಲ್ಲದೆ ಬಡವರು, ಅನಕ್ಷರಸ್ಥರು ಸಹ ಅವರಲ್ಲಿ ಸೇರಿದ್ದರು. ಮೌಲವಿ ಮತ್ತು ಅವರ ಬಹಳಷ್ಟು ಮುಸ್ಲಿಂ ಸ್ನೇಹಿತರಂತೂ ಸ್ವಾಮೀಜಿಯ ಕೋಣೆಗೆ ನಿರಂತರವಾಗಿ ಭೇಟಿ ನೀಡುತ್ತಿದ್ದರು. ಸ್ವಾಮೀಜಿಯ ಪರಮಭಕ್ತರಾಗಿ ಹೋಗಿದ್ದ ಮೌಲವಿ ಅವರಿಗೆ ಸ್ವಾಮೀಜಿಯನ್ನು ತಮ್ಮ ಮನೆಗೆ ಕರೆದು ಉಪಚರಿಸಬೇಕೆಂಬ ಬಯಕೆ ತೀವ್ರವಾಗಿತ್ತು. ಮಹಾನ್ ಸಾಧುವಾಗಿರುವ ಸ್ವಾಮೀಜಿಗೇನೋ ಜಾತೀಯತೆಯ ಹಂಗಿಲ್ಲದೇ ಇರಬಹುದು, ಆದರೆ ಅವರು ಉಳಿದುಕೊಂಡಿರುವ ಪಂಡಿತ್‌ಜಿ ಇದಕ್ಕೆ ತಕರಾರು ತೆಗೆಯಬಹುದು ಎಂದು ಅವರು ಭಾವಿಸಿದ್ದರು.

ಆದಾಗ್ಯೂ ಸ್ವಾಮೀಜಿಯನ್ನು ತಮ್ಮ ಮನೆಗೆ ಕರೆತರುವ ತಮ್ಮ ಅಭಿಲಾಷೆಯನ್ನು ಪಂಡಿತ್‌ಜಿ ಅವರಲ್ಲಿ ಪ್ರಸ್ತಾಪಿಸಲು ಅವರು ತೀರ್ಮಾನಿಸಿದರು. ಮೌಲವಿ ಅವರ ಈ ಮನವಿಗೆ ಎಷ್ಟು ಪ್ರೀತಿ, ಶ್ರದ್ಧೆ ಮತ್ತು ನಮ್ರವಾದ ಪ್ರತಿಕ್ರಿಯೆ ವ್ಯಕ್ತವಾಯಿತೆಂದರೆ, ಮೌಲವಿ ಅವರ ಕೈಗಳನ್ನು ಹಿಡಿದುಕೊಂಡ ಪಂಡಿತ್‌ಜಿ, 'ನನ್ನ ಸ್ನೇಹಿತನೇ, ಹೇಳಿಕೇಳಿ ಸ್ವಾಮೀಜಿ ಒಬ್ಬರು ಸಾಧು. ಜಾತಿಯನ್ನು ಅವರು ಲೆಕ್ಕಿಸುವರೇ? ಆದರೆ ನೀವು ಹೆಚ್ಚು ತೊಂದರೆ ತೆಗೆದುಕೊಳ್ಳಬೇಕಾದ ಅಗತ್ಯವಿಲ್ಲ, ಯಾವ ಬಗೆಯ ವ್ಯವಸ್ಥೆಯನ್ನು ನೀವು ಮಾಡಿದರೂ ನಾವು ತೃಪ್ತರಾಗುತ್ತೇವೆ' ಎಂದು ಹೇಳಿದರು. ಬಳಿಕ ಸ್ವಾಮೀಜಿಯನ್ನು ತಮ್ಮ ಮನೆಗೆ ಕರೆದೊಯ್ದು ಉಪಚರಿಸಿದ ಮೌಲವಿ, ತಮ್ಮ ಅಭಿಲಾಷೆ ಈಡೇರಿಸಿಕೊಂಡು ಕೃತಾರ್ಥ ಭಾವನೆ ಹೊಂದಿದರು. ಬಳಿಕ ಇತರ ಮುಸ್ಲಿಂ ಭಕ್ತರು ಸಹ ಮೌಲವಿ ಅವರ ಮಾದರಿಯನ್ನೇ ಅನುಸರಿಸಿ ಹೃತ್ಪೂರ್ವಕವಾಗಿ ಸ್ವಾಮೀಜಿಯನ್ನು ತಮ್ಮ ಮನೆಗೆ ಆಹ್ವಾನಿಸಿ ಸಂತುಷ್ಟರಾದರು. ◆